# ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ

ಅಭಿವೃದ್ಧಿಯ ಕನಸನ್ನು ಕಾಣುವ ಪ್ರತಿಯೊಂದು ಹಳ್ಳಿಯು ತನ್ನ ಪ್ರತಿಯೊಬ್ಬ ಸದಸ್ಯರನ್ನು ಅಭಿವೃದ್ಧಿಯ ಪಾಲುದಾರರನ್ನಾಗಿ ನೋಡಬೇಕಿದೆ. 2011 ರ ಜನಗಣತಿಯಂತೆ ಮಹಿಳೆಯರು ದೇಶದ ಜನಸಂಖ್ಯೆಯ ಅರ್ಧದಷ್ಟಿದ್ದಾರೆ, ಹಾಗೂ ಪ್ರತಿ ಹಳ್ಳಿಯಲ್ಲಿಯು ಸರಿಸುಮಾರು ಅರ್ಧದಷ್ಟು ಜನಸಂಖ್ಯೆ ಮಹಿಳೆಯರೆ ಆಗಿದ್ದಾರೆ. ಮಹಿಳೆಯರ ಪಾಲುದಾರಿಕೆಯಿಲ್ಲದ ಅಭಿವೃದ್ಧಿ ಒಂದೇ ಚಕ್ರದಲ್ಲಿ ಚಲಿಸುವ ಗಾಡಿಯಂತಾಗುತ್ತದೆ.

ಪುರುಷ ಪ್ರಧಾನ ಕೌಟುಂಬಿಕ ವ್ಯವಸ್ಥೆಯನ್ನು ಹೊಂದಿರುವ ವಿಶ್ವದಲ್ಲಿ ಬಹುತೇಕ ದೇಶಗಳಲ್ಲಿ ಮಹಿಳೆಯರು ಅಸಮಾನತೆಯನ್ನು ಒಂದಿಲ್ಲಾ ಒಂದು ರೂಪದಲ್ಲಿ ಎದುರಿಸುತ್ತಿದ್ದಾರೆ. ಈ ಚಿತ್ರಣ ಭಾರತದಲ್ಲಿ ಭಿನ್ನವಾಗಿಲ್ಲ. ಇಂದಿಗೂ ಮಹಿಳೆಯರು ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳಿಂದ ವಂಚಿತರಾಗುತ್ತಾ ಬಂದಿದ್ದಾರೆ ಮತ್ತು ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ಗುರುತಿಸಲಾಗುತ್ತಿದೆ. ಸರ್ಕಾರದ ನಿರಂತರ ಪ್ರಯತ್ನಗಳ ನಡುವೆಯೂ ಇಂದಿಗೂ ಮಹಿಳೆಯರು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅಸಮಾನತೆಗಳನ್ನು ಎದುರಿಸುತ್ತಿದ್ದಾರೆ.

ಸ್ವಾತಂತ್ರ್ಯ ಪಡೆದು 75 ವರ್ಷಗಳನ್ನು ಪೂರ್ಣಗೊಳಿಸುವ ಈ ಸಂದರ್ಭದಲ್ಲಿಯೂ ದೇಶವು ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಲು ಸಾಧ್ಯವಾಗಿಲ್ಲ. ದೇಶದ ಅನಕ್ಷರಸ್ಥರಲ್ಲಿ ಶೇ.34.54 ರಷ್ಟು ಮಹಿಳೆಯರಿದ್ದಾರೆ. ಸಾಕ್ಷರರಲ್ಲದ ಜನಸಂಖ್ಯೆಯಲ್ಲಿ ಬಹುಪಾಲು ಗ್ರಾಮೀಣ ಭಾಗದ ಮಹಿಳೆಯರಾಗಿದ್ದಾರೆ ಎಂಬುದು ವಾಸ್ತವ. ಪರಿಣಾಮ ಇಂದಿಗೂ ಮಹಿಳೆಯರು ಮನೆಯ ಹಂತದಲ್ಲಿ, ಸಮುದಾಯದ ಹಂತದ ನಿರ್ಧಾರ ಕೈಗೊಳ್ಳುವ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಗ್ರಾಮ ಪಂಚಾಯಿತಿ ಮಿತಿಯ ಗ್ರಾಮಗಳನ್ನು ಅಭಿವೃದ್ಧಿ ಪಡಿಸಬೇಕಾದರೆ, ಸರ್ವರಿಗು ಸಮಪಾಲು ಸರ್ವರಿಗು ಸಮಬಾಳು ಎಂಬುವ ತತ್ವದಂತೆ ಎಲ್ಲರೂ ಭಾಗವಹಿಸಬೇಕು ಮತ್ತು ಕಾರ್ಯಪ್ರವೃತ್ತರಾಗಬೇಕು. ಗ್ರಾಮಗಳಲ್ಲಿ ಇಂದಿಗೂ ಮಹಿಳೆಯರು ತಾರತಮ್ಯಗಳನ್ನು ಅನುಭವಿಸುತ್ತಿದ್ದಾರೆ. ಸರ್ಕಾರದ ನಿರಂತರ ಪ್ರಯತ್ನ ಮತ್ತು ಸಂವಿಧಾನದ ಅವಕಾಶಗಳ ಹೊರತಾಗಿಯೂ ಇಂದಿಗೂ ಗ್ರಾಮದಲ್ಲಿರುವ ಪ್ರತಿಯೊಬ್ಬ ಹೆಣ್ಣುಮಗು, ಯುವತಿ, ವಿವಾಹಿತೆ, ವೃದ್ಧೆಯರು ಇಂದಿಗೂ ಜಾತಿ, ಧರ್ಮದ ಆಧಾರದ ಮೇಲೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಗ್ರಾಮವನ್ನು ಮಹಿಳಾ ಸ್ನೇಹಿಯಾಗಿಸಬೇಕೆಂದರೆ ಪ್ರತಿಯೊಂದು ಗ್ರಾಮವು ಕೆಳಗಿನ ಅಂಶಗಳನ್ನು ಹೊಂದಲೇಬೇಕಾಗಿರುವುದು ಅಗತ್ಯ ಅವುಗಳೆಂದರೆ

1. ಹುಟ್ಟುವ ಮಗು ಹೆಣ್ಣಾಗಿರಲಿ ಗಂಡಾಗಿರಲಿ ಇಬ್ಬರನ್ನು ಒಂದೇ ಮನಃಸ್ಥಿತಿಯಲ್ಲಿ ಪ್ರೀತಿಯಿಂದ ಬರಮಾಡಿಕೊಳ್ಳುವುದು
2. ಎಲ್ಲಾ ಮಕ್ಕಳಿಗೂ ನಿಗದಿಯಂತೆ ಕಡ್ಡಾಯವಾಗಿ ಚುಚ್ಚು ಮದ್ದುಗಳನ್ನು ಹಾಕಿಸುವುದು
3. ಹೆಣ್ಣುಮಕ್ಕಳಿಗೆ ಸರ್ಕಾರವು ನೀಡುವ ಹೆಚ್ಚುವರಿ ಸೌಲಭ್ಯಗಳು ದೊರೆಯುವಂತೆ ಮಾಡುವುದು

4. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವುದು, ಹೆಣ್ಣು ಮಕ್ಕಳು ಶಾಲೆಯಲ್ಲಿಯೇ ಉಳಿಯುವಂತೆ ಮಾಡುವುದು ಮತ್ತು ಪ್ರೋತ್ಸಾಹಿಸುವುದು.
5. ಹೆಣ್ಣು ಮಕ್ಕಳಿಗೆ ಶಾಲೆ, ಮನೆ, ಆಟದ ಸ್ಥಳ ಮತ್ತು ಸಮುದಾಯವು ಶೋಷಣೆ ಮತ್ತು ದೌರ್ಜನ್ಯದಿಂದ ಮುಕ್ತವಾದ ಸುರಕ್ಷಿತ ಸ್ಥಳ ಎಂಬ ಭಾವನೆ ಮೂಡುವಂತೆ ವಾತಾವರಣ ನಿರ್ಮಿಸುವುದು.
6. ಹೆಣ್ಣು ಮಕ್ಕಳಿಗೆ ಅಗತ್ಯವಾಗಿ ಬೇಕಾದ ಹೆಚ್ಚುವರಿ ಪೌಷ್ಟಿಕಾಂಶವನ್ನು ಒದಗಿಸುವುದು
7. ವೈಯಕ್ತಿಕ ಸ್ವಚ್ಛತೆ ಮತ್ತು ನೈರ್ಮಲ್ಯದ ಕುರಿತು ಬಾಲಕಿಯರಿಗೆ ಮತ್ತು ಮಹಿಳೆಯರಿಗೆ ತಿಳಿಸುವುದು.
8. ಹೆಣ್ಣು ಮಕ್ಕಳಿಗೆ ಒಳ್ಳೆಯ ಸ್ಪರ್ಶ ಮತ್ತು ಕೆಟ್ಟ ಉದ್ದೇಶದ ಸ್ಪರ್ಶದ ಬಗ್ಗೆ ತಿಳಿಸಿ ಹೇಳುವುದು ಮತ್ತು ತಕ್ಷಣವೇ ಈ ಪ್ರಕರಣಗಳನ್ನು ವರದಿ ಮಾಡುವುದು.
9. ಬಾಲ್ಯವಿವಾಹ, ವರದಕ್ಷಿಣೆ ಕಿರುಕುಳ ಮತ್ತು ಕೌಟುಂಬಿಕ ಹಿಂಸೆಗಳ ಕುರಿತು ಬಾಲಕಿಯರಲ್ಲಿ ಮತ್ತು ಮಹಿಳೆಯರಲ್ಲಿ ಅರಿವು ಮೂಡಿಸುವುದು.
10. ಮಹಿಳೆಯರ ಕಳ್ಳಸಾಗಾಣಿಕೆ, ಅಪಹರಣ, ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಅಸಭ್ಯ ಪ್ರದರ್ಶನ ಇತ್ಯಾದಿಗಳನ್ನು ನಿಯಂತ್ರಿಸುವುದು ಮತ್ತು ಜಾಗೃತಿ ಮೂಡಿಸುವುದು
11. ದೇಶದಲ್ಲಿ ಹೆಣ್ಣು ಮಕ್ಕಳಿಗಾಗಿ ಇರುವ ರಕ್ಷಣಾತ್ಮಕ ಕಾನೂನುಗಳು ಮತ್ತು ಸಂಘ ಸಂಸ್ಥೆಗಳ ಬಗ್ಗೆ ಅರಿವು ಮೂಡಿಸುವುದು
12. ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಉಚಿತ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು
13. ಉನ್ನತ ಶಿಕ್ಷಣ ಮಾಡಲು ಬಯಸುವ ಹೆಣ್ಣು ಮಕ್ಕಳಿಗೆ ಪಂಚಾಯಿತಿಯಿಂದ ಪ್ರೋತ್ಸಾಹಿಸುವುದು ಮತ್ತು ಸಹಾಯ ಒದಗಿಸುವುದು
14. ಪಠ್ಯೇತರ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿರುವ ಹೆಣ್ಣು ಮಕ್ಕಳನ್ನು ಪ್ರೋತ್ಸಾಹಿಸುವುದು ಮತ್ತು ಅವರುಗಳನ್ನು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಅಗತ್ಯ ಬೆಂಬಲವನ್ನು ನೀಡುವುದು.
15. ಗ್ರಾಮದಲ್ಲಿ 18 ವರ್ಷದೊಳಗೆ ಯಾವುದೇ ಹೆಣ್ಣು ಮಗುವಿನ ವಿವಾಹ ಪ್ರಸ್ತಾಪವಾಗದಂತೆ ನಿರಂತರ ಮೇಲ್ವಿಚಾರಣೆ ಮಾಡುವುದು.
16. ಉದ್ಯೋಗಾಸಕ್ತ ಮಹಿಳೆಯರಿಗೆ ಗ್ರಾಮ ಪಂಚಾಯಿತಿಯಿಂದ ಉದ್ಯೋಗಕ್ಕೆ ಪೂರಕವಾದ ತರಬೇತಿ ಮತ್ತು ಮಾಹಿತಿಯನ್ನು ಒದಗಿಸುವುದು ಮತ್ತು ಆರ್ಥಿಕ ಬೆಂಬಲ ನೀಡುವುದು.
17. ಗ್ರಾಮದ ಎಲ್ಲಾ ಮಹಿಳೆಯರು ಸ್ವ ಸಹಾಯ ಸಂಘದ ಸದಸ್ಯರಾಗುವುದು
18. ಸ್ವ ಸಹಾಯ ಸಂಘದ ಮೂಲಕ ಜೀವನೋಪಾಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳನ್ನು ಬೆಂಬಲಿಸುವುದು ಮತ್ತು ಪ್ರೋತ್ಸಾಹಿಸುವುದು.
19. ಸರ್ಕಾರಿ ಮತ್ತು ಖಾಸಗಿ ಉದ್ಯೋಗದಲ್ಲಿ ಮಹಿಳೆಯರಿಗೆ ಇರುವ ಮೀಸಲಾತಿಯ ಸದುಪಯೋಗ ಪಡೆದುಕೊಳ್ಳಲು ತಿಳಿಸುವುದು ಮತ್ತು ಉದ್ಯೋಗ ಮಾಹಿತಿಯನ್ನು ಪಂಚಾಯಿತಿಯ ನೋಟಿಸ್ ಬೋರ್ಡಿನಲ್ಲಿ ಅಂಟಿಸುವುದು.

20. ಗ್ರಾಮ ಪಂಚಾಯಿತಿ ಹಂತದ ಮಹಿಳಾ ಆಯ–ವ್ಯಯದ ಕುರಿತು ಯೋಜನೆ ಸಿದ್ಧಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು
21. ಸರ್ಕಾರವು ನೀಡುವ ಎಲ್ಲಾ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಾದ ಪಡಿತರ ಚೀಟಿ, ಪಿಂಚಣಿ, ಆರೋಗ್ಯ ಚೀಟಿಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಮಾಡುವುದು
22. ಮಹಿಳೆಯರ ವಿಶೇಷ ಗ್ರಾಮಸಭೆಗಳನ್ನು ಕಾಲಕಾಲಕ್ಕೆ ಆಯೋಜಿಸಿ, ಮಹಿಳೆಯರ ಕುಂದು ಕೊರತೆಗಳನ್ನು ಆಲಿಸುವುದು ಮತ್ತು ಪರಿಹರಿಸಲು ಕ್ರಮ ಕೈಗೊಳ್ಳುವುದು.
23. ಗ್ರಾಮೀಣ ಪ್ರದೇಶದ ನಿರ್ಗತಿಕ ಮಹಿಳೆಯರು, ಒಂಟಿ ಮಹಿಳೆಯರು, ದಮನಿತ ಮಹಿಳೆಯರು ಮತ್ತು ಮಹಿಳಾ ಪ್ರಧಾನ ಕುಟುಂಬಗಳಿಗೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸೌಲಭ್ಯಗಳು ತಲುಪುವಂತೆ ಖಾತರಿಪಡಿಸುವುದು.
24. ಮಹಿಳಾ ಸಹಾಯವಾಣಿಯ ಸಂಖ್ಯೆಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುವುದು ಮತ್ತು ಪ್ರಚುರಪಡಿಸುವುದು.

ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ 5ನೇ ಪ್ರಮುಖ ಗುರಿಯಾದ ಮಹಿಳಾ ಸಬಲೀಕರಣ ಮತ್ತು ಲಿಂಗತ್ವ ಸಮಾನತೆಯ ಕುರಿತು ಪ್ರಸ್ತಾಪಿಸಿದೆ. ಸಂವಿಧಾನವು ನೀಡಿರುವ ಅವಕಾಶಗಳಡಿಯಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ರಚಿಸಿರುವ ನೀತಿ–ನಿಯಮಗಳು, ಕಾನೂನುಗಳು, ನಿಗಮಗಳು, ಯೋಜನೆ ಮತ್ತು ಕಾರ್ಯಕ್ರಮಗಳನ್ನು ಬಳಸಿಕೊಂಡು ರಾಜ್ಯವು ಗ್ರಾಮಗಳನ್ನು ಮಹಿಳಾ ಸ್ನೇಹಿ ಗ್ರಾಮಗಳನ್ನಾಗಿಸುವ ಗುರಿಯನ್ನು ಹೊಂದಿದೆ.

ಅನಸಾರಾಗ್ರಾ&ಪಂರಾಸಂ

# ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ

ಮಕ್ಕಳು ದೇಶದ ಇಂದಿನ ಪ್ರಜೆಗಳು ಮಾತ್ರವಲ್ಲ ದೇಶದ ಇಂದಿನ ಭವಿಷ್ಯ. ದೇಶವು ಸುಭದ್ರವಾಗಿರಬೇಕಾದರೆ ಇಂದಿನಿಂದಲೇ ಮಕ್ಕಳಲ್ಲಿ ದೇಶಭಕ್ತಿಯ ಜೊತೆಗೆ ಒಬ್ಬ ಪ್ರಜ್ಞಾವಂತ ಪ್ರಜೆಯಾಗಿ ರೂಪುಗೊಳ್ಳಲು ಅಗತ್ಯವಿರುವ ವಾತಾವರಣವನ್ನು ನಿರ್ಮಿಸಬೇಕು. ಮಕ್ಕಳಿಗೆ ತಾವು ವಾಸಿಸುವ ಪರಿಸರವನ್ನು ಪ್ರೀತಿಸುವ ಸಂರಕ್ಷಿಸುವುದರ ಜೊತೆಗೆ, ಅವರು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಹೊಣೆಗಾರಿಕೆಗಳ ಕುರಿತು ಅರಿವನ್ನು ಮೂಡಿಸಬೇಕು.

ಬಹುತೇಕ ಸಂದರ್ಭಗಳಲ್ಲಿ ಮಕ್ಕಳು ತಮಗೆ ದೇಶದ ಸಂವಿಧಾನವು ನೀಡಿರುವ ಹಕ್ಕುಗಳ ಬಗ್ಗೆಯಾಗಲಿ ಅಥವಾ ಸರ್ಕಾರವು ನೀಡುತ್ತಿರುವ ಸೌಕರ್ಯಗಳ ಬಗ್ಗೆಯಾಗಲಿ ಅರಿವಿರುವುದಿಲ್ಲ. ಇವುಗಳನ್ನು ಮಕ್ಕಳಿಗೆ ತಿಳಿಸುವ ಮತ್ತು ಮಕ್ಕಳಿಗಾಗಿ ವಿಶೇಷ ಗ್ರಾಮಸಭೆಗಳನ್ನು ಆಯೋಜಿಸುವ ಹೊಣೆಗಾರಿಕೆ ಗ್ರಾಮ ಪಂಚಾಯಿತಿಯದ್ದಾಗಿದೆ. ಗ್ರಾಮ ಪಂಚಾಯಿತಿಯನ್ನು ಮಕ್ಕಳ ಸ್ನೇಹಿಯನ್ನಾಗಿಸುವ ಜವಾಬ್ದಾರಿ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಸಾರ್ವಜನಿಕರದಾಗಿದೆ. ಗ್ರಾಮ ಪಂಚಾಯಿತಿಯ ಜೊತೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳು ನೇರವಾಗಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿಯನ್ನಾಗಿ ಪರಿವರ್ತಿಸುವಲ್ಲಿ ಸಹಕರಿಸಬೇಕಿದೆ. ಯಾವುದೇ ಗ್ರಾಮವನ್ನು ಮಕ್ಕಳ ಸ್ನೇಹಿಯನ್ನಾಗಿಸಲು ಮಾಡಬೇಕಾದ ಕೆಲವೊಂದು ಅತ್ಯಂತ ಪ್ರಮುಖ ಕೆಲಸಗಳು ಈ ಕೆಳಗಿನಂತಿವೆ.

1. ಮಗುವು ಆರೋಗ್ಯವಾಗಿ ಜನಿಸುವ ದೃಷ್ಟಿಯಿಂದ ಮಹಿಳೆಯು ಗರ್ಭಿಣಿಯೆಂದು ಗುರುತಿಸಿದ ತಕ್ಷಣ ಅವರನ್ನು ಅಂಗನವಾಡಿಯಲ್ಲಿ ನೊಂದಾಯಿಸುವುದು. ಕುಟುಂಬವು ನೀಡುವ ಆಹಾರಧಾನ್ಯಗಳ ಜೊತೆಗೆ ಸರ್ಕಾರವು ನೀಡುವ ಪೂರಕ ಪೌಷ್ಟಿಕ ಆಹಾರವು ದೊರೆಯುವಂತೆ ನೋಡಿಕೊಳ್ಳುವುದು.
2. ಪ್ರತಿಯೊಬ್ಬ ಗರ್ಭಿಣಿಯು, ತಾಯಂದಿರ ಕಾರ್ಡನ್ನು ಹೊಂದುವುದು ಮತ್ತು ಅದರಂತೆ ಚುಚ್ಚುಮದ್ದು ಮತ್ತು ಲಸಿಕೆಗಳನ್ನು ಪಡೆದುಕೊಳ್ಳುವುದು.
3. ಗ್ರಾಮದ ಎಲ್ಲಾ ಮಕ್ಕಳು ಆಸ್ಪತ್ರೆಗಳಲ್ಲಿಯೇ ಜನಿಸುವಂತೆ ಪ್ರೋತ್ಸಾಹಿಸುವುದು.
4. ಜನಿಸಿದ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಇಂದ್ರಧನುಷ್– ಏಳು ಲಸಿಕೆ ಮತ್ತು ಚುಚ್ಚುಮದ್ದುಗಳನ್ನು ಹಾಕಿರುವುದನ್ನು ಖಾತರಿಪಡಿಸಿಕೊಳ್ಳುವುದು.
5. ಹೆಣ್ಣು ಮಗುವು ಜನಿಸಿದಾಗ ಸರ್ಕಾರವು ನೀಡುವ ಭಾಗ್ಯಲಕ್ಷ್ಮೀ–ಸುಕನ್ಯ ಸಂವೃದ್ಧಿ ಯೋಜನೆಯ ಫಲಾನುಭವಿಗಳಾಗುವಂತೆ ಕ್ರಮವಹಿಸುವುದು.
6. 3 ವರ್ಷ ಮೇಲ್ಪಟ್ಟ ಎಲ್ಲಾ ಮಕ್ಕಳು ಕಡ್ಡಾಯವಾಗಿ ಅಂಗನವಾಡಿಗಳಿಗೆ ದಾಖಲಾಗುವಂತೆ ಗಮನಿಸುವುದು

7. ಅಂಗನವಾಡಿಗಳಿಂದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವಂತೆ ಮತ್ತು ಶಾಲೆಯಲ್ಲಿಯೇ ಉಳಿಯುವಂತೆ ಕ್ರಮ ಕೈಗೊಳ್ಳುವುದು
8. ಮಕ್ಕಳ ಸಹಾಯವಾಣಿಯ ಸಂಖ್ಯೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ, ಶಾಲೆಗಳ ಗೋಡೆಗಳ ಮೇಲೆ ಬರೆಸುವುದು.
9. ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಹೆಣ್ಣು ಮಕ್ಕಳು ಶಾಲೆಯಿಂದ ಹೊರಗುಳಿಯುವುದನ್ನು ತಡೆಯಲು ಹೆಣ್ಣು ಮಕ್ಕಳಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡುವುದು.
10. ಶಾಲೆಯಲ್ಲಿ ಮಕ್ಕಳಿಗೆ ನೀಡುವ ಶುಚಿ ಪ್ಯಾಡುಗಳು ಸಕಾಲದಲ್ಲಿ ಮಕ್ಕಳಿಗೆ ತಲುಪುವಂತೆ ಕ್ರಮವಹಿಸುವುದು.
11. ಹೆಣ್ಣು ಮಕ್ಕಳು ಹೆಚ್ಚಿರುವ ಶಾಲೆಗಳಲ್ಲಿ ಇನ್ಸ್ಯುಬೇಟರ್ ಗಳನ್ನು ಅಳವಡಿಸಿ ನೈರ್ಮಲ್ಯವನ್ನು ಕಾಪಾಡುವುದು.
12. ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಮರಳಿಶಾಲೆಗೆ ಕಳುಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು
13. ಪಾಠ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಗುರುತಿಸಿಕೊಂಡ ಮಕ್ಕಳನ್ನು ಗ್ರಾಮ ಪಂಚಾಯಿತಿಯಿಂದ ಪ್ರೋತ್ಸಾಹಿಸುವುದು
14. ಓದುವುದರಲ್ಲಿ ಮುಂದಿರುವ ಮಕ್ಕಳನ್ನು ಗುರುತಿಸಿ ಉನ್ನತ ಶಿಕ್ಷಣಕ್ಕೆ ಆರ್ಥಿಕ ಬೆಂಬಲ ನೀಡಿ ಪ್ರೋತ್ಸಾಹಿಸುವುದು
15. ಮಕ್ಕಳ ಮೇಲಾಗುವ ದೌರ್ಜನ್ಯಗಳು, ಬಾಲ ಕಾರ್ಮಿಕತೆ, ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ದೈಹಿಕ ಹಿಂಸೆಗಳ ಕುರಿತು ಶಾಲೆಗಳಲ್ಲಿ ಮತ್ತು ಕುಟುಂಬದ ಸದಸ್ಯರಿಗೆ ಗ್ರಾಮಸಭೆಗಳಲ್ಲಿ ತಿಳಿಸುವುದು ಮತ್ತು ಮಕ್ಕಳನ್ನು ಸುರಕ್ಷಿತರಾಗಿರುವಂತೆ ಕ್ರಮವಹಿಸುವುದು.
16. ಮಕ್ಕಳ ಕಳ್ಳಸಾಗಾಣಿಕೆ ತಡೆಗೆ ಇರುವ ಸಮಿತಿಗಳನ್ನು ಬಲಪಡಿಸುವುದು
17. ಗ್ರಾಮದಲ್ಲಿ ಮಕ್ಕಳ ಲಿಂಗಾನುಪಾತವು ಉತ್ತಮವಾಗಿರುವಂತೆ ನೋಡಿಕೊಳ್ಳುವುದು.
18. ಮಕ್ಕಳ ಹಕ್ಕುಗಳ ಕುರಿತು ಸಾರ್ವಜನಿಕ ಸ್ಥಳಗಳಲ್ಲಿ ಗೋಡೆ ಬರಹಗಳನ್ನು ಬರೆಸಿ ಜಾಗೃತಿ ಮೂಡಿಸುವುದು
19. ಮಕ್ಕಳ ಗ್ರಾಮಸಭೆಗಳನ್ನು ಆಯೋಜಿಸುವುದು ಮತ್ತು ತಜ್ಞರಿಂದ ಮಕ್ಕಳಿಗೆ ಮಾರ್ಗದರ್ಶನ ನೀಡುವುದು
20. ಶಿಕ್ಷಣವನ್ನು ಮುಂದುವರೆಸಲು ಮಾರ್ಗದರ್ಶನಕ್ಕಾಗಿ ಕೋರ್ಸುಗಳ ಆಯ್ಕೆಯನ್ನು ಪ್ರಜ್ಞಾವಂತರಾಗಿ ಮಾಡಲು ಮಕ್ಕಳಿಗೆ ಆಪ್ತ ಸಮಾಲೋಚನೆಯನ್ನು ಆಯೋಜಿಸುವುದು.

ಮಕ್ಕಳ ರಕ್ಷಣೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗೆ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಇಲಾಖೆಗಳು ಮತ್ತವರ ಕಾರ್ಯಕ್ರಮಗಳ ಕುರಿತು ವ್ಯಾಪಕ ಪ್ರಚಾರವನ್ನು ಕೈಗೊಳ್ಳಬೇಕಿದೆ. ಪ್ರಮುಖವಾಗಿ ಗ್ರಾಮಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಮಾಹಿತಿಯನ್ನು ಗ್ರಾಮ

ಪಂಚಾಯಿತಿಯು ಹೊಂದಿರಬೇಕು ಮತ್ತು ಮಾಹಿತಿಯನ್ನು ಗೋಡೆಗಳಲ್ಲಿ ನಮೂದಿಸುವುದು. ಸ್ಥಳೀಯವಾಗಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಹಾಗೂ ಸುರಕ್ಷತೆಗಾಗಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಉತ್ತಮ ಸಂಬಂಧ ಹೊಂದುವುದರೊಂದಿಗೆ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿಯನ್ನಾಗಿಸುವುದು.

ಅನಸಾರಾಗ್ರಾ&ಪಂರಾಸಂ